OS 184/2013
PW1

ದಿನಾಂಕ 31.01.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು** : ಶ್ರೀ ಜಿ ಎಂ ಬಿ ವಕೀಲರಿಂದಃ

ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಅಕ್ಷರಗಳನ್ನು ಕಂಡುಹಿಡಿಯುವಂತೆ ಸೂಚಿಸಿದ್ದು ಸಾಕ್ಷಿಯು ಕನ್ನಡಕ ಹಾಕಿಕೊಂಡರೂ ನನಗೆ ಗುರುತಿಸಲು ಬರುವುದಿಲ್ಲ ಎಂದು ಉತ್ತರ ನೀಡಿರುತ್ತಾರೆ. ನನಗೆ ಕನ್ನಡಕ ಹಾಕಿಕೊಂಡು ಚೆನ್ನಾಗಿ ಕಾಣುತ್ತಿದ್ದರೂ ಉದ್ದೇಶಪೂರ್ವಕವಾಗಿ ಕಾಣುತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನನಗೆ ಯಾವ ವರ್ಷದವರೆಗೆ ಪ್ರಸ್ತುತ ಕನ್ನಡಕದಲ್ಲಿ ಕಾಣುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಕೂಸು ಪೂಜಾರ್ತಿಯವರು ಮೃತಪಟ್ಟ ನಂತರ ನನ್ನ ತಾಯಿಯವರು ಭೂ ನ್ಯಾಯ ಮಂಡಳಿಗೆ ನೀಡಿದ ಹೇಳಿಕೆಯನ್ನು ಅನುಭವ ಮಾಡಿಕೊಂಡಿರುತ್ತೇನೆ. ನನ್ನ ತಾಯಿಯು ಭೂ ನ್ಯಾಯ ಮಂಡಳಿಯಲ್ಲಿ ಸತ್ಯವಾದ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯವರು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುವ ಪ್ರತಿವಾದಪತ್ರವನ್ನು ಅಷ್ಟಾಗಿ ಅನುಭಮಾಡಿಕೊಂಡಿರುವುದಿಲ್ಲ. ನನ್ನ ತಾಯಿಯು ಭೂ ನ್ಯಾಯ ಮಂಡಳಿಗೆ ಹಾಜರಾದ ವಿಷಯವನ್ನು ಮಾತ್ರ ತಿಳಿದುಕೊಂಡಿರುತ್ತೇನೆ. ನನ್ನ ತಾಯಿಯು ಪ್ರಸ್ತುತ ದಾವೆಯಲ್ಲಿ ಏನೆಲ್ಲಾ ಸಾಧನೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯ ಅನುಸೂಚಿ ಆಸ್ತಿಗಳ ಮೇಲೆ ಈ ಹಿಂದೆ ಉಡುಪಿ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ 178/98 ಎಂದು ದಾವೆಯನ್ನು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1992 ರವರೆಗೆ ನಾನು ಮತ್ತು ನನ್ನ ತಾಯಿ ಒಟ್ಟಿಗೆ ವಾಸವಾಗಿದ್ದೇವು. ನನ್ನ ಮತ್ತು ನನ್ನ ತಾಯಿಯ ಮನೆಗೆ ಸುಮಾರು 600 ಅಡಿ ಅಂತರವಿದೆ. ನನ್ನ ಮನೆಯನ್ನು ಯಾವ ವರ್ಷದಲ್ಲಿ ಕಟ್ಟಿರುತ್ತೇನೆ ಎನ್ನುವ ಕುರಿತು ದಾಖಲೆಗಳು ಇವೆ. ಅವುಗಳನ್ನು ಹಾಜರುಪಡಿಸಲು

ಯಾವುದೇ ಅಭ್ಯಂತರವಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಈಗಾಗಲೇ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮನೆ ನಿರ್ಮಿಸುವಾಗ ಸದ್ರಿ ಜಾಗವು ನನ್ನ ಹೆಸರಿನಲ್ಲಿ ಇರಲಿಲ್ಲ ಮತ್ತು ಅದು ಕೂಸು ಪೂಜಾರ್ತಿಯವರ ಹೆಸರಿನಲ್ಲಿತ್ತು. ನಾನು ಮನೆಕಟ್ಟುವ ಸಮಯದಲ್ಲಿ ಕೂಸು ಪೂಜಾರ್ತಿಯವರು ಮೃತಪಟ್ಟಿದ್ದರು ಎಂದರೆ ಸರಿ. ಆ ರೀತಿ ಮನೆ ಕಟ್ಟುವಾಗ ಕೂಸು ಪೂಜಾರ್ತಿಯವರ ವಾರುಸುದಾರರ ಅನುಮತಿಯನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಅನುಮತಿ ಪಡೆದುಕೊಂಡಿದ್ದೆ ಎಂದು ತೋರಿಸಲು ದಾಖಲೆಗಳು ಇವೆಯಾ ಎಂದರೆ ಸಾಕ್ಷಿಯು ಆ ರೀತಿಯ ಯಾವುದೇ ದಾಖಲೆಗಳು ಇಲ್ಲ ಮತ್ತು ಮೌಖಿಕವಾಗಿ ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ನಾನು ಮನೆಕಟ್ಟುವಾಗ ಕೂಸು ಪೂಜಾರ್ತಿಯ ವಾರುಸುದಾರರು ಆಕ್ಷೇಪ ಮಾಡಿದ್ದರು ಎಂದರೆ ಸರಿಯಲ್ಲ. 15ನೇ ಪ್ರತಿವಾದಿಯ ಪ್ರಸ್ತುತ ದಾವೆಯಲ್ಲಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ದಿಃ31.07.2002 ರಂದು ಮೂಲ ದಾವೆ ಸಂಖ್ಯೆ 178/98 ಡಿಕ್ರಿಯಾಗಿದ್ದು ಮತ್ತು ಎಫ್‌ಡಿಪಿ ಸಂಖ್ಯೆ 19/11 ರಂತೆ ಅಂತಿಮ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ದಾವೆಯಲ್ಲಿ ನನ್ನ ತಾಯಿಯು ಒಬ್ಬ ಪಕ್ಷಗಾರರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಸರ್ವೆ ಮಾಡಲು ಬಂದಾಗ ಸದ್ರಿ ವಿಚಾರ ತಿಳಿದು ಬಂದಿರುತ್ತದೆ. ಸದ್ರಿ ದಾವಾ ವಿಚಾರ ತಿಳಿದು ಬಂದ ನಂತರ ಪಕ್ಷಗಾರರಾಗಿ ಸೇರಿಸಿಕೊಳ್ಳುವಂತೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಸದ್ರಿ ದಾವೆಯ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸದ್ರಿ ದಾವೆಯ ಯಾವುದೇ ವಿಷಯಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಪ್ರಸ್ತುತ ದಾಖಲೆಗಳನ್ನು ನೋಡಿರುವುದಿಲ್ಲ.

ದಾವಾ ಆಸ್ತಿಯು ಮೂಲತಃ ಚಾಲಗೇಣಿ ಆಸ್ತಿ. ಆ ರೀತಿ ದಾವಾ ಆಸ್ತಿಗಳು ಚಾಲಗೇಣಿ ಆಸ್ತಿಗಳು ಎಂದು ತೋರಿಸಲು ಚಾಲಗೇಣಿ ದಾಖಲೆಯನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯ ಆ ಕುರಿತು ನಮ್ಮ ಹಿರಿಯರು ನುಡಿಯುತ್ತಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೂಲ ವಿಚಾರಗಳು ನನ್ನ ತಾಯಿಗೆ ಗೊತ್ತಿದೆಯೋ ಇಲ್ಲವೊ

ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಆ ಕುರಿತು ನಾನು ಕೇಳಿ ವಿಚಾರಿಸಿರುವುದಿಲ್ಲ. ಮರಿಯಮ್ಮ ಹೆಂಗಸ್ಸು ಎಂಬುವವರನ್ನು ನೋಡಿರುತ್ತೇನೆ. ಅವರು ಯಾವ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಮತ್ತು ನನಗೆ 8 ವರ್ಷ ಪ್ರಾಯವಾಗಿದ್ದಾಗ ದಾವಾ ಆಸ್ತಿಯಲ್ಲಿ ಮೃತಪಟ್ಟಿರುತ್ತಾರೆ. ಸದ್ರಿ ಮರಿಯಮ್ಮ ರವರು ದಾವಾ ಆಸ್ತಿಯಲ್ಲಿಯೇ ಮೃತಪಟ್ಟ ಬಗ್ಗೆ ಬೇರೆಯವರಿಗೂ ತಿಳಿದಿದೆ. ಆ ರೀತಿ ಅಪ್ಪು ಪೂಜಾರಿ ಮತ್ತು ಚಂದಯ್ಯ ಪೂಜಾರಿ ಮತ್ತು ಇತರರಿಗೆ ತಿಳಿದಿದೆ. ಮರಿಯಮ್ಮರವರು ದಾವಾ ಆಸ್ತಿಯಲ್ಲಿ ಇದ್ದ ಬಗ್ಗೆ ದಾಖಲೆಗಳು ಇಲ್ಲ. ಮರಿಯಮ್ಮ ಹೆಂಗಸು ರವರು ದಾವಾ ಆಸ್ತಿಗಳನುನ ಗೇಣಿಗೆ ಪಡೆದುಕೊಂಡ ಬಗ್ಗೆ ದಾಖಲೆಗಳು ಇವೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳು ಇರಬಹುದು ಆದರೆ ಅವುಗಳು ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಸದ್ರಿ ದಾಖಲೆಗಳನ್ನು ಸಂಬಂಧಿಸಿದ ಇಲಾಖೆಗಳಿಂದ ಪಡೆದುಕೊಳ್ಳಲು ಇಲ್ಲಿಯವರೆಗೂ ಪ್ರಯುತ್ನಿಸಿರುವುದಿಲ್ಲ. ದಾವಾ ಆಸ್ತಿಗಳು ಕೂಸು ಪೂಜಾರ್ತಿರವರ ಆಸ್ತಿಗಳು ಎಂದು ಸಾಧನೆ ಮಾಡುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಭೂ ನ್ಯಾಯ ಮಂಡಳಿಯ ಎಲ್ಲಾ ದಾಖಲೆಗಳಲ್ಲಿ ದಾವಾ ಆಸ್ತಿಯು ಕೂಸುಪೂಜಾರ್ತಿರವರು ವಹಿಸಿಕೊಂಡ ಆಸ್ತಿಗಳು ಎಂದು ಕಂಡು ಬರುತ್ತವೆ ಎಂದರೆ ಸರಿಯಲ್ಲ.

ಚಂದಯ್ಯ ಪೂಜಾರಿಯವರು ದಾವಾ ಆಸ್ತಿಯಲ್ಲಿ ಮೃತಪಟ್ಟಿರುತ್ತಾರೆ. ಆ ಕುರಿತು ದಾಖಲೆಗಳು ಇವೆ ಮತ್ತು ಅವುಗಳನ್ನು ಹಾಜರುಪಡಿಸಿರುತ್ತೇನೆ.

ಮುಂದುವರಿದ ಪಾಟೀ ಸವಾಲು ಸಮಯಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.